ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ:ಎಸ್‌ಬಿಆರ್:2011

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ, ಬೆಂಗಳೂರು
ದಿನಾಂಕ: 28-10-2011

## ಸುತ್ತೋಲೆ

ವಿಷಯ : ಸ್ಥಳೀಯ ಸಂಸ್ಥೆಗಳು ಭಿಕ್ಷುಕರ ಕರವನ್ನು (Beggary Cess) ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು ಇಲ್ಲಿಗೆ ಕಡ್ಡಾಯವಾಗಿ ಜಮೆ ಮಾಡುವ ಕುರಿತು.

ಉಲ್ಲೇಖ : ಮಾನ್ಯ ಉಚ್ಚನ್ಯಾಯಾಲಯದ ಆದೇಶ- ರಿಟ್ ಅರ್ಜಿ ಸಂ: 10075:2007((GM-RES-PIL), ದಿನಾಂಕ: 08-09-2011 - ಬಿ.ಕೃಷ್ಣಾಭಟ್ v/s ಸ್ಟೇಟ್ ಆಫ್ ಕರ್ನಾಟಕ.

-------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸ್ಥಳೀಯ ಸಂಸ್ಥೆಗಳು ಭಿಕ್ಷಾಟನಾ ನಿಷೇಧ ಕಾಯಿದೆ 1975 ರನ್ವಯ ಸಾರ್ವಜನಿಕರಿಂದ ಸಂಗ್ರಹಿಸುವ 3% ಭಿಕ್ಷುಕರ ಕರವನ್ನು ವಿಳಂಬ ಮಾಡದೇ ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು ಇಲ್ಲಿಗೆ ವಸೂಲಾದ ಭಿಕ್ಷುಕರ ಕರವನ್ನು ಜಮೆ ಮಾಡುವುದು ಕಡ್ಡಾಯವಾಗಿರುತ್ತದೆ. ಆದರೆ ಹಲವಾರು ಸ್ಥಳೀಯ ಸಂಸ್ಥೆಗಳು ಇದನ್ನು ಗಂಭೀರವಾಗಿ ಪರಿಗಣಿಸದೇ ಸಂಗ್ರಹವಾದ ಕರ ಸಕಾಲದಲ್ಲಿ ಕೇಂದ್ರ ಪರಿಹಾರ ಸಮಿತಿಗೆ ಪಾವತಿ ಮಾಡಿರುವುದಿಲ್ಲ.

ಈ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಮಾನ್ಯ ಉಚ್ಚನ್ಯಾಯಾಲಯ ಈಗಾಗಲೇ ತೀರ್ಪು ನೀಡಿರುತ್ತದೆ. ಅದರ ಮುಖ್ಯಾಂಶ:-

**"ಯಾವುದೇ ಸ್ಥಳೀಯ ಸಂಸ್ಥೆಗಳು ಕರ ವಸೂಲಿ ಮಾಡಿದ ತಕ್ಷಣ ಸಂಬಂದಪಟ್ಟವರಿಗೆ ಜಮೆ ಮಾಡದೇ ಇದ್ದಲ್ಲಿ ಅಂತಹ ಪ್ರಕರಣಗಳನ್ನು ಹಣ ದುರುಪಯೋಗ ಹಾಗೂ ದಂಡಾನಾರ್ಹ ಪ್ರಕರಣ ಎಂದು ಪರಿಗಣಿಸಲಾಗುತ್ತದೆ".**

ಆದ್ದರಿಂದ, ಮಾನ್ಯ ಉಚ್ಚನ್ಯಾಯಾಲಯದ ತೀರ್ಪಿನ ಪ್ರಕಾರ ವಸೂಲಿ ಮಾಡಿರುವ ಆಸ್ತಿ ತೆರಿಗೆಯ ವಿವರಗಳು ಮತ್ತು ಅದರ ತೆರಿಗೆಯ ಶೇಕಡ 3ರ ಅನುಪಾತದ ಭಿಕ್ಷುಕರ ಕರ ಲೆಕ್ಕ ಹಾಕಿ, ಬಾಕಿ ಇರುವ ಪೂರ್ಣ ಕರವನ್ನು ತಕ್ಷಣವೇ ಡಿ.ಡಿ. ಮೂಲಕ (ಡಿ.ಡಿ.ಯನ್ನು ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ, ಬೆಂಗಳೂರು ಇವರ ಹೆಸರಿನಲ್ಲಿ) ಈ ಕೆಳಕಂಡ ವಿಳಾಸಕ್ಕೆ ಕಳುಹಿಸಲು ಕೋರಿದೆ.

**ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿ, ಮಾಗಡಿ ರಸ್ತೆ,**
**ಬೆಂಗಳೂರು -560 091.**
**ದೂರವಾಣಿ : 080-23486626**

ಮಾನ್ಯ ಉಚ್ಚನ್ಯಾಯಾಲಯವು ನೀಡಿರುವ ಆದೇಶದ ಪರಿಪಾಲನೆ ಬಗ್ಗೆ ಮತ್ತೊಮ್ಮೆ ಉಚ್ಚನ್ಯಾಯಾಲಯದಲ್ಲಿ ಪರಿಶೀಲಿಸುವುದು ಬಾಕಿ ಉಳಿದಿರುವ ಹಿನ್ನಲೆಯಲ್ಲಿ ಸದರಿ ತೀರ್ಪಿನ ಅನುಪಾಲನೆಗೆ ಧಕ್ಕೆಯಾಗದಂತೆ ಹಾಗೂ "ನ್ಯಾಯಾಲಯದ ನಿಂದನೆಗೆ" ಅವಕಾಶವಾಗದಂತೆ ಅಗತ್ಯಕ್ರಮ ಕೈಗೊಳ್ಳಲು ಕೋರಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ,

ಪ್ರತಿಗಳು

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ, ಬೆಂಗಳೂರು
3) ಆಯುಕ್ತರು, ಪೌರಾಡಳಿತ ಇಲಾಖೆ, ಬೆಂಗಳೂರು
4) ಎಲ್ಲಾ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ
5) ಎಲ್ಲಾ ಜಿಲ್ಲಾಧಿಕಾರಿಗಳು
6) ಎಲ್ಲಾ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು

7) ಎಲ್ಲಾ ಕಾರ್ಯನಿರ್ವಹಕ ಅಧಿಕಾರಿಗಳು
8) ಎಲ್ಲಾ ಪೌರಾಯುಕ್ತರು, ನಗರಸಭೆ
9) ಎಲ್ಲಾ ಮುಖ್ಯಾಧಿಕಾರಿಗಳು, ಪುರಸಭೆ
10) ರಕ್ಷಣಾ ಕಡತ
11) ಹೆಚ್ಚುವರಿ ಪ್ರತಿ